## ಪ್ರಬಂಧ

ಎಲ್ಲೋ ಗುಹೆಯಲ್ಲಿ ವಾಸಿಸುತ್ತಾ, ಸತ್ತ ಪ್ರಾಣಿಗಳ ಮಾಂಸ ತಿನ್ನುತ್ತ, ಮಲಿನ ನೀರು ಕುಡಿಯುತ್ತಾ ಬದುಕಿದ್ದನಂತೆ. ಇತ್ತೀಚೆಗೆ ಗ್ರಾಮಸ್ಥರು ಮೊದಲ ಬಾರಿಗೆ ಒತ್ತಾಯದಿಂದ ಅವನನ್ನು ಕರೆತಂದು ಬಲವಂತವಾಗಿ ಸ್ನಾನ ಮಾಡಿಸಿದ ಮೇಲೆ ಆತನ ಆರೋಗ್ಯ ಹದಗೆಟ್ಟು ನಿಧನ ಹೊಂದಿದನಂತೆ. ಸ್ನಾನ ಮಾಡದೆ ಅತಿ ಹೆಚ್ಚು ಕಾಲ ಬದುಕಿ ಉಳಿದ ವ್ಯಕ್ತಿ ಎಂದು ಆತ ದಾಖಲೆ ಮಾಡಿದ್ದಾನೆ. ಈ ಹಿಂದೆ ಸತತ ಮೂವತ್ತೊಂಬತ್ತು ವರ್ಷ ಸ್ನಾನ ಮಾಡದೇ ಇರುವ ದಾಖಲೆ ಭಾರತದ ಕೈಲಾಸ ಸಿಂಗ್ ಎಂಬ ವ್ಯಕ್ತಿಯ ಹೆಸರಿನಲ್ಲಿತ್ತಂತೆ. ಇಂಥದ್ದೂ ಒಂದು ದಾಖಲೆಯಿದೆ ಎಂದರೆ ಅಚ್ಚರಿಯಾಗುತ್ತದೆ. ಅಂದರೆ ಒಬ್ಬ ವ್ಯಕ್ತಿ ಸ್ನಾನ ಮಾಡದೆ, ಯಾವ ರೋಗರುಜಿನ ಇಲ್ಲದೆ ಅಷ್ಟು ವರ್ಷ ಬದುಕಬಹುದೆಂಬುದು, ಮತ್ತು ಸ್ನಾನ ಮಾಡಿದರೆ ವ್ಯಕ್ತಿ ಸಾಯುತ್ತಾನೆ ಎಂಬುದು ನನ್ನ ಚಿಂತೆ ಅಥವಾ ಚಿಂತನೆಗೆ ಕಾರಣ.

ಶೌಚ, ಸ್ನಾನಗಳಿಲ್ಲದೆ ನಮ್ಮ ದಿನ ಆರಂಭವಾಗದು. ಶೌಚಕ್ಕಾಗಿ ಹಲವರು ಹಲವು ಬಗೆಯಲ್ಲಿ ತಿಣುಕಾಡಬಹುದು. ಆದರೆ, ಸ್ನಾನಕ್ಕಾಗಿ ತೊಂದರೆ ಪಡಬೇಕಿಲ್ಲ. ತಣ್ಣೀರೋ ಬಿಸಿನೀರೋ ಅಂತೂ ಸ್ನಾನ ಒಂದು ಆಗಲೇಬೇಕು. ದಿನಾಲು ಎರಡು ಹೊತ್ತು ಸ್ನಾನ ಮಾಡುವವರೂ ಇರುತ್ತಾರೆ. ಇತ್ತೀಚೆಗೆ ಸ್ನಾನ ಎನ್ನುವುದು ಬಹಳ ಹೈಟೆಕ್ ಆಗಿದ್ದು, ಮನೆಗಳಲ್ಲಿ ಬಾತ್ ರೂಂಗಳಿಗೆ ಕೂಡ ಸಾಕಷ್ಟು ಪ್ರಾಮುಖ್ಯತೆ ಪ್ರಾಪ್ತವಾಗಿದೆ. ಅಲ್ಲಿ ಸೌಲಭ್ಯಗಳ ವಿಸ್ತರಣೆಯಾಗಿದೆ.

ನಾವು ಕೈಲಾಸ ಮಾನಸ ಸರೋವರದ ಯಾತ್ರೆ ಸಂದರ್ಭದಲ್ಲಿ ಸ್ನಾನ ಮಾಡದ ಅಲ್ಲಿನ ಸ್ಥಳೀಯರನ್ನು ಗಮನಿಸಿದ್ದೆವು. ಯಾತ್ರಿಕರಿಗೆ ಕುದುರೆ ಸೇವೆ ಒದಗಿಸುವವರು, ಸಣ್ಣ ವ್ಯಾಪಾರಿಗಳು, ಸ್ಥಳೀಯ ಸಣ್ಣ ಮಾರಾಟಗಾರರು ಹತ್ತಿರ ಬಂದರೆ ಗಬ್ಬುನಾರುತ್ತಿದ್ದರು. ಅವರು ಸ್ನಾನ ಮಾಡದೇ ಇರಲು ಅಲ್ಲಿನ ಚಳಿಯ ಪರಿಸರ ಕಾರಣವಾಗಿರಬಹುದು. ನಾವು ಮಾನಸ ಸರೋವರದಲ್ಲಿ ಮಿಂದು ಪವಿತ್ರಗೊಂಡವೆಂದು ಭಾವಿಸಿದರೆ ಅವರು ನಿತ್ಯ ಅದೇ ಪರಿಸರದಲ್ಲಿದ್ದು ದೀರ್ಘಕಾಲ ಸ್ನಾನ ಮಾಡದೇ ಇರುವುದು ಕಂಡುಬಂತು. ತಾವು ಈಗಾಗಲೇ ಕೈಲಾಸ ಪರಿಸರದಲ್ಲಿರುವಾಗ ಸ್ನಾನದ ಹಂಗೇಕೆ ಎಂಬ ನಡೆ ಅವರದಾಗಿರಬಹುದು. ಮಾನಸ ಸರೋವರದಲ್ಲಿ ಬ್ರಾಹ್ಮಿ ಮುಹೂರ್ತದಲ್ಲಿ ದೇವತೆಗಳು ಸ್ನಾನ ಮಾಡುತ್ತಾರೆಂಬ ನಂಬಿಕೆ ಇದೆ. ಅವರು ನಿತ್ಯ ಸ್ನಾನ ಮಾಡುತ್ತಾರೋ ಗೊತ್ತಿಲ್ಲ. ಕೈಲಾಸ ಪರ್ವತ ಪರಿಸರದಲ್ಲಿ 'ಗೌರಿ ಕುಂಡ' ಎಂಬ ಒಂದು ಸ್ಥಳವಿದೆ. ಅದು ಪಾರ್ವತಿ ದೇವಿ ನಿತ್ಯ ಸ್ನಾನ ಮಾಡುತ್ತಿದ್ದ ಪವಿತ್ರ ಕುಂಡ ಎಂದು ಹೇಳಲಾಗುತ್ತದೆ. ಪಾರ್ವತಿದೇವಿ ಒಮ್ಮೆ ಸ್ನಾನ ಮಾಡುವಾಗ ಗಣೇಶನನ್ನು ಕಾವಲಿಗೆ ಇಟ್ಟು ಸ್ನಾನ ಮಾಡಲು ಹೋದದ್ದು, ಆಗ ಶಿವ ಬಂದು ಒಳಗೆ ಪ್ರವೇಶಿಸಲು ಯತ್ನಿಸಿದ್ದು, ಶಿವನಿಗೆ ಗಣೇಶ ಪ್ರವೇಶ ನಿರಾಕರಿಸಿದ್ದು, ಶಿವ ಗಣೇಶನ ರುಂಡವನ್ನು ಹಾರಿಸಿದ್ದು, ನಂತರ ರಾದ್ಧಾಂತ ನಡೆದು ಗಣೇಶ ಗಜಮುಖನಾದದ್ದು ನಮ್ಮ ಪುರಾಣ ಪುಣ್ಯ ಕಥೆಗಳ ಮಹತ್ವದ ಭಾಗ. ಇಡೀ ಕೈಲಾಸ ಪರಿಸರ ಬಟಾ ಬಯಲು ಶೀತಲ ಮಂಜುಗಡ್ಡೆಯ ಬೆಟ್ಟದ ಪ್ರದೇಶ. ಅಲ್ಲಿ ಶಿವ ಪಾರ್ವತಿಯರ ವಾಸ ಹೇಗೋ, ಸ್ನಾನ ಹೇಗೋ ಬಲ್ಲವರಾರು. ಅವೆಲ್ಲ ನಂಬಿಕೆಯ ವಿಚಾರಗಳು.

ರಾಮ ಲಕ್ಷ್ಮಣ ಸೀತೆಯರ ವನವಾಸಕ್ಕೆ ಸಂಬಂಧಿಸಿದಂತೆ ಅನೇಕ ಸ್ಥಳಗಳು ನಮ್ಮ ದೇಶದ ತುಂಬೆಲ್ಲ ಇವೆ. ಆಂಧ್ರದ ಭದ್ರಾಚಲಂ ಸಮೀಪ ಪರ್ಣಶಾಲೆ ಎಂಬ ಸ್ಥಳ ಇದೆ. ಅದು ದಂಡಕಾರಣ್ಯದ ಒಂದು ಭಾಗ. ರಾಮ ಲಕ್ಷ್ಮಣರು ತಮ್ಮ ವನವಾಸದ ಕೆಲ ಅವಧಿಯನ್ನು ಅಲ್ಲಿ ಕಳೆದರಂತೆ. ಅಲ್ಲಿ ಅವರ ವಾಸಸ್ಥಾನ, ಸೀತೆ ಸ್ನಾನ ಮಾಡುತ್ತಿದ್ದಳೆನ್ನಲಾದ ಸ್ಥಳ, ನೀರಿನ ತೊರೆ ಹಾಗೂ ಸೀತೆ ಬಟ್ಟೆ ಬದಲಾಯಿಸುವ ಸ್ಥಳ, ಬಟ್ಟೆ ಒಣಗಿಸುವ ಸ್ಥಳ ಎಂದು ತೋರಿಸಲಾಗುತ್ತದೆ. ಅಲ್ಲಿ ಅವರು ವಾಸಿಸುತ್ತಿದ್ದ ಕುಟೀರಗಳು, ಮಂದಿರಗಳನ್ನು ಮರು ನಿರ್ಮಿಸಲಾಗಿದೆ. ಇದೇ ಸ್ಥಳದಿಂದ ರಾವಣ ಸೀತೆಯನ್ನು ಅಪಹರಿಸಿದನೆಂದು ಪ್ರತೀತಿ.

ಇನ್ನು ರಾಮನ ತಮ್ಮ ಲಕ್ಷ್ಮಣನ ಹೆಂಡತಿ ಊರ್ಮಿಳೆಯದು ಒಂದು ಕಥೆ. ಅದೇ ತಾನೇ ಮದುವೆಯಾಗಿದ್ದ ಲಕ್ಷ್ಮಣ ಹೆಂಡತಿ ಊರ್ಮಿಳೆಗೆ ಹೇಳದೆ ಕೇಳದೆ ಆಕೆಯನ್ನು ಬಿಟ್ಟು, ರಾಮನ ಜೊತೆ ವನವಾಸಕ್ಕೆ ಹೊರಟ. ಆಮೇಲೆ ಊರ್ಮಿಳೆಯ ಗತಿ ಏನಾಯಿತು ಗೊತ್ತಿಲ್ಲ. ಅವಳು ಬಹಳ ಹೊತ್ತು